ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-3, November-December 2025, Pp. 50-56
©*IIMRD*, Mysuru

IIMRD JOURNALS
www.iimrd.com

# ಸೋಲಿಗ ಬುಡಕಟ್ಟು ಸಮುದಾಯದ ಜೀವನ ಮತ್ತು ಸಂಸ್ಕೃತಿ

**ಡಾ. ಕುಮಾರಸ್ವಾಮಿ ಎ.ಎನ್**

ಸಂಶೋಧಕರು, ಚಾಮರಾಜನಗರ

**ಸಾರಾಂಶ: (Abstract)**

*ಸೋಲಿಗರು ಕರ್ನಾಟಕದ ಪ್ರಮುಖ ಬುಡಕಟ್ಟು ಜನಾಂಗಗಳಲ್ಲಿ ಒಂದಾಗಿದ್ದು, ತಮ್ಮದೇ ಆದ ಆಚಾರ, ವಿಚಾರ, ಸಾಂಪ್ರದಾಯಿಕ ಪದ್ಧತಿಯೊಂದಿಗೆ ಜೀವನ ಸಾಗಿಸುತ್ತಿದ್ದಾರೆ. 2011ನೇ ಜನಗಣತಿ ಪ್ರಕಾರ ಸೋಲಿಗರು ರಾಜ್ಯದ 23 ಜಿಲ್ಲೆಯಲ್ಲಿ ಕಂಡುಬಂದರೂ ಸಹಾ ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ಇವರು ಪ್ರಮುಖವಾಗಿ ಚಾಮರಾಜನಗರ ಜಿಲ್ಲೆಯ ಮಹದೇಶ್ವರಬೆಟ್ಟ, ಬಿಳಿಗಿರಿರಂಗನಬೆಟ್ಟ, ಗೋಪಾಲಸ್ವಾಮಿಬೆಟ್ಟ ಮತ್ತು ಬಂಡೀಪುರ ಅರಣ್ಯ ಮತ್ತು ಅರಣ್ಯದಂಚಿನ ಪ್ರದೇಶಗಳಲ್ಲಿ ಹೆಚ್ಚಾಗಿ ವಾಸಿಸುತ್ತಾರೆ.*

**ಮುಖ್ಯಪದಗಳು (Keywords):** *ಬುಡಕಟ್ಟು ಸಮುದಾಯ, ಸೋಲಿಗ ಸಮುದಾಯ, ಚಾಮರಾಜನಗರ ಜಿಲ್ಲೆ*

## ಪೀಠಿಕೆ

ಸೋಲಿಗರು ಕರ್ನಾಟಕದ ಪ್ರಮುಖ ಬುಡಕಟ್ಟು ಸಮುದಾಯಗಳಲ್ಲಿ ಒಂದಾಗಿದೆ. ಇವರು ಸೋಲಿಗರು ಕಾಡಿನ ಜೊತೆ ಅವಿನಾಭಾವ ಸಂಬಂಧ ಹೊಂದಿದ್ದು, ತಮ್ಮದೇಯಾದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದ್ದಾರೆ. ಸೋಲಿಗರು ವಾಸಿಸುವ ಸ್ಥಳಗಳನ್ನು ಪೋಡು ಅಥವಾ ಹಾಡಿ ಎಂಬುದಾಗಿ ಕರೆಯುತ್ತಾರೆ. ಇಂತಹ ಹಾಡಿ ಅಥವಾ ಪೋಡುಗಳಲ್ಲಿ ಪುಟ್ಟ ಗುಡಿಸಲುಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಾರೆ. ಈ ಗುಡಿಸಲುಗಳು ಸುಮಾರು 8 ಅಡಿ ಅಗಲ 10 ಅಡಿ ಉದ್ದವಾಗಿದ್ದು, ಮೇಲ್ಛಾವಣಿಗೆ ಹುಲ್ಲು, ಸೊಪ್ಪು ಮತ್ತು ತೆಂಗಿನ ಗರಿಗಳನ್ನು ಬಳಸುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಸರ್ಕಾರದ ಪ್ರಯತ್ನಗಳಿಂದಾಗಿ ಅವರನ್ನು ಕಾಡಿನಿಂದ ಹೊರ ತಂದು ಹೆಂಚಿನ ಮನೆ ಮತ್ತು ಶೀಟಿನ ಮನೆಗಳನ್ನು ಕಟ್ಟಿಕೊಟ್ಟಿದ್ದಾರೆ. ಈ ಮನೆಗಳು ಸಾಮಾನ್ಯವಾಗಿ ನಡುಮನೆ (ಹಾಲ್), ಕೋಣೆ (ಅಡುಗೆ ಮನೆ) ಮತ್ತು ವರಾಂಡ (ಹಜಾರ) ಹೊಂದಿರುತ್ತವೆ. ಪಕ್ಕದಲ್ಲಿ ತೆಂಗಿನ ಗರಿ ಹಾಗೂ ಹಳೆಯ ಬಟ್ಟೆಗಳಿಂದ ಸ್ನಾನದ ಮನೆಯನ್ನು ನಿರ್ಮಿಸಿಕೊಂಡಿರುತ್ತಾರೆ. ವಿದ್ಯುತ್ ಸಂಪರ್ಕವಿದ್ದರೂ ಸಹ ಬಹುತೇಕ ಕುಟುಂಬಗಳಲ್ಲಿ ವಿದ್ಯುತ್ ಶುಲ್ಕ ಪಾವತಿಸದ ಕಾರಣ ಸಂಪರ್ಕ ಕಡಿತಗೊಳಿಸಲಾಗಿದೆ. ಇತ್ತೀಚೆಗೆ ಪೋಡು ಅಥವಾ ಹಾಡಿಗಳನ್ನು ಕಾಲೋನಿ ಎಂಬ ಹೆಸರಿನಿಂದ ಕರೆಯುತ್ತಾರೆ.

*Please cite this article as:* ಕುಮಾರಸ್ವಾಮಿ, ಎ.ಎನ್. (2025). ಸೋಲಿಗ ಬುಡಕಟ್ಟು ಸಮುದಾಯದ ಜೀವನ ಮತ್ತು ಸಂಸ್ಕೃತಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ. 50–56*

ಸೋಲಿಗರಲ್ಲಿ ಅನೇಕ ಕುಲಗಳಿವೆ. ಇತರ ಜನರಲ್ಲಿ ಕಂಡುಬರುವಂತೆ ಸೋಲಿಗರಲ್ಲಿಯೂ ಕುಲದ ವಿಂಗಡಣೆಯಿದೆ. ಸೋಲಿಗರಲ್ಲಿ ಕುಟುಂಬಕ್ಕೆ ಹೆದರದವನು ಕುಲಕ್ಕೆ ಹೆದರುತ್ತಾನೆ. ಕುಲಕ್ಕೆ ಅಂಜಿ ಅದಕ್ಕೆ ತಕ್ಕಂತೆ ತನ್ನ ಜೀವನವನ್ನು ರೂಪಿಸಿಕೊಳ್ಳುತ್ತಾನೆ. ಸೋಲಿಗರ ಯಾವುದೇ ಧಾರ್ಮಿಕ ಕಾರ್ಯಗಳು ಕುಲವನ್ನು ಪ್ರತಿನಿಧಿಸುವ ಹಿರಿಯರ ಸಮ್ಮುಖದಲ್ಲಿಯೇ ನಡೆಯುತ್ತದೆ. ಸೋಲಿಗರಲ್ಲಿರುವ ಈ ಬಗೆಯ ಕುಲದ ವ್ಯವಸ್ಥೆ ಬಂಧುತ್ವವನ್ನು ಗುರುತಿಸಿಕೊಳ್ಳುವ ಸಲುವಾಗಿಯೂ ಮತ್ತು ನೆಂಟಸ್ತಿಕೆ ಬೆಳೆಸುವ ಸಲುವಾಗಿಯೂ ಅವಶ್ಯಕವಾದುದಾಗಿದೆ.

ಸೋಲಿಗರಲ್ಲಿ ಪ್ರಮುಖವಾಗಿ ಐದು ಕುಲದ ಸೋಲಿಗ ಮತ್ತು ಏಳು ಕುಲದ ಸೋಲಿಗ ಎಂಬ 2 ರೀತಿ ಇದೆ. ಐದು ಕುಲದ ಸೋಲಿಗರಲ್ಲಿ ಸೆಳಕಿರಕುಲ, ಆಲರಕುಲ, ಬೆಳ್ಳರಕುಲ, ಸೂರರಕುಲ ಮತ್ತು ತನೇರುಕುಲದವರು ಕಂಡುಬರುತ್ತಾರೆ.  ಇತ್ತೀಚೆಗೆ ಬಳೆಯರಕುಲದವರು ಸಹ ಕಂಡುಬರುತ್ತಾರೆ. ಏಳು ಕುಲದವರಲ್ಲಿ ಕುಪ್ಪ, ಕುರ್‌ನಾಗ, ದೇವನ, ಕಲಕಟ್ಟಿ, ಸಂಬಾರ್, ಕೊಡುವ ಮತ್ತು ವೆಳ್ಳಗ ಕುಲದವರು ಕಂಡುಬರುತ್ತಾರೆ. ಐದುಕುಲದ ಸೋಲಿಗರನ್ನು ಮಲೆಸೋಲಿಗ ಎಂತಲೂ ಮತ್ತು ಏಳುಕುಲದ ಸೋಲಿಗರನ್ನು ಊರಾಳಿ ಸೋಲಿಗ ಎಂತಲೂ ಕರೆಯುತ್ತಾರೆ.

ಈ ಕುಲ ಪದ್ಧತಿಯು ಅವರಲ್ಲಿ ಸಂಬಂಧವನ್ನು ಬೆಳೆಸುವ ಸಂದರ್ಭದಲ್ಲಿ ಮುಖ್ಯ ಪಾತ್ರವಹಿಸುತ್ತದೆ. ಒಂದು ಕುಲದಿಂದ ಇನ್ನೊಂದು ಕುಲಕ್ಕೆ ಹೆಣ್ಣನ್ನು ತಂದು ಕೊಳ್ಳುವುದು ಸಾಮಾನ್ಯ. ಆದರೆ ಒಂದೇ ಕುಲದ ಒಳಗೆ ಸಂಬಂಧ ಬೆಳೆಸುವುದನ್ನು ನಿಷೇಧಿಸಲಾಗಿದೆ. ಈ ಅಂಶವನ್ನು ಚಂದ್ರಪ್ಪ (1990) ರವರು ತಮ್ಮ ಅಧ್ಯಯನದಲ್ಲಿ ಗುರುತಿಸಿದ್ದಾರೆ. ಐದುಕುಲದ ಸೋಲಿಗ ಮತ್ತು ಏಳುಕುಲದ ಸೋಲಿಗರಲ್ಲಿ ನಡುವೆ ಮೊದಲು ವೈವಾಹಿಕ ಸಂಬಂಧಗಳು ಏರ್ಪಡುತ್ತಿರಲಿಲ್ಲ ಆದರೆ ಇತ್ತೀಚೆಗೆ ಬೆರಳೆಣಿಕೆ ಮಂದಿ ಸಂಬಂಧ ಬೆಳೆಸುವುದನ್ನು ಕಾಣಬಹುದಾಗಿದೆ.

ನಂಜುಂಡಯ್ಯ.ಹೆಚ್.ವಿ. ಮತ್ತು ಎಲ್. ಕೆ. ಅನಂತಕೃಷ್ಣ ಅಯ್ಯರ್ (1930) 'The Mysore tribes and caste' ಎಂಬ ಗ್ರಂಥದಲ್ಲಿ ಸೋಲಿಗರಲ್ಲಿ ಉರಾಳಿ ಸೋಲಿಗ, ಮಲೈ ಸೋಲಿಗ, ಕಾಡು ಸೋಲಿಗ, ಊರ ಬುಟ್ಟಿ ಸೋಲಿಗ ಎಂಬ ನಾಲ್ಕು ಪಂಗಡಗಳಿವೆ ಎಂದು ಹೇಳಿದ್ದಾರೆ. ಊರಾಳಿ ಸೋಲಿಗರು ಚಾಮರಾಜನಗರ ಮತ್ತು ಸತ್ಯಮಂಗಲದಲ್ಲಿ ಕಂಡುಬರುತ್ತಾರೆ. ಮಲೈ ಸೋಲಿಗರು ಮತ್ತು ಕಾಡು ಸೋಲಿಗರು ಬಿಳಿಗಿರಿರಂಗನ ಬೆಟ್ಟ ಮತ್ತು ಮಹದೇಶ್ವರ ಬೆಟ್ಟದ ಸುತ್ತಮುತ್ತಲಿನಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಹಾಗೂ ಊರಬುಟ್ಟಿ ಸೋಲಿಗರು ಹೆಚ್.ಡಿ.ಕೋಟೆ ಮತ್ತು ಕಾಕನಕೋಟೆ ಅರಣ್ಯ ಪ್ರದೇಶಗಳಲ್ಲಿ ಕಂಡುಬರುತ್ತಾರೆ. ಊರಬುಟ್ಟಿ ಸೋಲಿಗರನ್ನು ಈ ಭಾಗದಲ್ಲಿ ಬುರುಡೆ ಸೋಲಿಗರೆಂದು ಸಹ ಕರೆಯುತ್ತಾರೆ. ಸೋಲಿಗರಲ್ಲಿ ಈ ಬಗೆಯ ಎಷ್ಟು ಪಂಗಡಗಳಿವೆ ಎಂದು ನಿರ್ಧಿಷ್ಟವಾಗಿ ಹೇಳಲು ಬರುವುದಿಲ್ಲ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ದೇವಸೋಲಿಗ ಎಂಬ ಸೋಲಿಗರು ಕಂಡುಬರುತ್ತಾರೆ. ಇವರು ಹೆಚ್.ಡಿ.ಕೋಟೆ ತಾಲ್ಲೂಕಿನಲ್ಲಿಯೂ ಸಹಾ ಕಂಡುಬರುತ್ತಾರೆ.

ಸೋಲಿಗರು ತಮ್ಮ ಜೀವನ ನಿರ್ವಹಣೆಗಾಗಿ ಕೂಲಿ, ವ್ಯವಸಾಯದ ಜೊತೆಗೆ ಜೇನು, ಪಾಸೆ, ನೆಲ್ಲಿಕಾಯಿ, ಅರಳೆಕಾಯಿ, ಅಂಟುವಾಳ, ಹೊಂಗೆಬೀಜ, ಮಾಗ್ಲಿಬೇರು, ಜೇನುಮೇಣ, ಮರದಮೇಣ, ಹೊಂಗೆಬೀಜ, ಬೂರದಹತ್ತಿ, ಮಾವಿನಕಾಯಿ, ಸೀಬೆಕಾಯಿ ಮುಂತಾದ 20ಕ್ಕೂ ಹೆಚ್ಚು ಅರಣ್ಯದಲ್ಲಿ ಸಿಗುವ ಕಿರುಉತ್ಪನ್ನಗಳನ್ನು ಸಂಗ್ರಹಿಸಿ ಲ್ಯಾಂಪ್ಸ್ ಸೊಸೈಟಿಗೆ ಮಾರಾಟ ಮಾಡಿ ಜೀವನ ನಿರ್ವಹಿಸುತ್ತಿದ್ದಾರೆ. ಇದಲ್ಲದೆ ಕುರಿ, ಮೇಕೆ, ದನ ಮುಂತಾದ ಪ್ರಾಣಿಗಳನ್ನು ಸಾಕುತ್ತಾರೆ. ಮೂಲತಃ ಕೃಷಿಕರಾದ ಸೋಲಿಗರು ಹಿಂದೆ ಒಂದೆಡೆ ಕೃಷಿ ಮಾಡದೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾಹಿಸುತ್ತಿದ್ದರು ಇದನ್ನು ಕೆತ್ಲು ಅಥವಾ ಕುಮರಿ ಬೇಸಾಯ ಎಂದು ಕರೆಯುತ್ತಿದ್ದರು. ಮಳೆ ಬಂದ ತಕ್ಷಣ ಗುದ್ದಲಿ ಮತ್ತು ಪಿಕಾಶಿಗಳಿಂದ ಹದ ಮಾಡಿ ರಾಗಿ, ತೊಗರಿ, ಮುಸುಕಿನ ಜೋಳ, ಅವರೆ ಮುಂತಾದವುಗಳನ್ನು ಬೆಳೆಯುತ್ತಿದ್ದರು. ಆದರೆ ಇತ್ತೀಚಿಗೆ ಇಂತಹ ಬೇಸಾಯ ಪದ್ಧತಿ ಕಣ್ಮರೆಯಾಗಿದ್ದು, ಸರ್ಕಾರದಿಂದಲೇ ಕೃಷಿ ಭೂಮಿಯನ್ನು ಹಾಗೂ ನೆಲೆಸಲು ವಸತಿ ಸೌಕರ್ಯವನ್ನು ಕಲ್ಪಿಸಿ ಒಂದೆಡೆ ಬೇಸಾಯ ಮಾಡಲು ಅನುವು ಮಾಡಿಕೊಡಲಾಗಿದೆ.

ಸರ್ಕಾರ ಕೊಟ್ಟಿರುವ ಜಮೀನಿನಲ್ಲಿ ಬಹುತೇಕ ಸೋಲಿಗರು ವ್ಯವಸಾಯ ಮಾಡುತ್ತಿದ್ದಾರೆ. ಕೆಲವರು ಮಾತ್ರ ಕಾಡುಪ್ರಾಣಿಗಳ ಹಾವಳಿ ಮತ್ತು ಕೃಷಿಯ ಮೇಲಿನ ನಿರಾಸಕ್ತಿಯಿಂದಾಗಿ ತಮ್ಮ ಜಮೀನನ್ನು ಕೇರಳ, ತಮಿಳುನಾಡಿನಿಂದ ಬಂದವರಿಗೆ ಎಕರೆಗೆ 4 ರಿಂದ 6 ಸಾವಿರ ರೂಗಳಿಗೆ ಗುತ್ತಿಗೆ ನೀಡಿ ತಮ್ಮ ಜಮೀನಿನಲ್ಲಿ ತಾವೇ ಕೂಲಿಗಳಾಗಿ ದುಡಿಯುತ್ತಾ ಕೂಲಿಯನ್ನೇ ತಮ್ಮ ಜೀವನದ ಕಸುಬನ್ನಾಗಿ ಮಾಡಿಕೊಂಡಿದ್ದಾರೆ. ಜೊತೆಗೆ ಸ್ಥಳೀಯವಾಗಿ ಕೂಲಿ ಸಿಗದ ಕಾರಣ ನೆರೆ ರಾಜ್ಯಗಳಿಗೆ ವಲಸೆ ಹೋಗುವುದನ್ನು ಕಾಣಬಹುದಾಗಿದೆ.

ಇತ್ತೀಚಿನ ದಿನಗಳಲ್ಲಿ ಬೆರಳೆಣಿಕೆಯಷ್ಟು ಮಂದಿ ಅರಣ್ಯ ಇಲಾಖೆಯಲ್ಲಿ ಮಾವುತರಾಗಿ, ಗಾರ್ಡ್‌ಗಳಾಗಿ, ವಾಚರ್‌ಗಳಾಗಿ ದುಡಿಯುತ್ತಿದ್ದು, ಇವರಲ್ಲಿ ಕೆಲವರು ಖಾಯಂ ನೌಕರರಾಗಿದ್ದರೆ, ಕೆಲವರು ದಿನಗೂಲಿ ನೌಕರರಾಗಿ ದುಡಿಯುತ್ತಿದ್ದಾರೆ. ಕಣಿಯನಪುರ ಕಾಲೋನಿ ಮತ್ತು ಕಾರೇಮಾಳ ಹಾಡಿಯ ಕೆಲವರು ಬಂಡೀಪುರ ಅರಣ್ಯವಲಯದಲ್ಲಿರುವ ರೆಸಾರ್ಟ್‌ಗಳಲ್ಲಿ, ಹೋಟೆಲ್‌ಗಳಲ್ಲಿ ಸಹಾಯಕರಾಗಿ ದುಡಿದು ಸಂಪಾದಿಸುತ್ತಿದ್ದಾರೆ.

ಸೋಲಿಗರ ಜನನ ಅತ್ಯಂತ ಸೊಗಸಾದದು, ಮೊದಲನೆ ಹೆರಿಗೆ ತಾಯಿಯ ಮನೆಯಲ್ಲಿ ನಡೆಯುತ್ತದೆ. ಆಕೆಯ ಸಹಾಯಕ್ಕೆ ತಾಯಿ ಮತ್ತು ಹಿರಿಯ ಹೆಂಗಸರು ಇರುತ್ತಾರೆ. ಹೆರಿಗೆಯ ಸ್ಥಳಕ್ಕೆ ಗಂಡಸರ ನಿಷೇಧವಿರುತ್ತದೆ. ಸೋಲಿಗರು ಹೆರಿಗೆಯ ಸಂದರ್ಭದಲ್ಲಿ ಗರ್ಭಿಣಿ ಹೆಂಗಸರನ್ನು ಕೂರಿಸಿ ಇಲ್ಲವೆ ನಿಲ್ಲಿಸಿ ಹೆರಿಗೆ ಮಾಡಿಸುತ್ತಿದ್ದರು. ಹೆರಿಗೆ ಮಾಡಿಸುವವರನ್ನು ಸೂಲಗಿತ್ತಿ ಎಂದು ಕರೆಯುತ್ತಿದ್ದರು. ಇದೇ ಅಂಶವನ್ನು ಲಕ್ಷ್ಮಿಪತಿ (1992) ರವರು ಸಹಾ ಗುರುತಿಸುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಆರೋಗ್ಯ ಇಲಾಖೆಯ ಸುಧಾರಿತ ಕ್ರಮಗಳಿಂದಾಗಿ ಹೆರಿಗೆಯನ್ನು ಆಸ್ಪತ್ರೆಗಳಲ್ಲಿ ಮಾಡಿಸುತ್ತಾರೆ.

ಸೋಲಿಗ ಜನಾಂಗದಲ್ಲಿ ಮಗು ಜನಿಸಿದ ಮೇಲೆ ಗಂಡು ಮಕ್ಕಳಾದರೆ ಐದು ದಿನಗಳಲ್ಲಿ, ಹೆಣ್ಣು ಮಗುವಾದರೆ ನಾಲ್ಕು ದಿನಗಳಲ್ಲಿ ನಾಮಕರಣ ಮಾಡುತ್ತಾರೆ. ಆದರೆ ಸಿಂಗ್.ಕೆ.ಎಸ್. (1994) ರವರು ಮಗು ಹುಟ್ಟಿದ 8ನೇ ದಿನಕ್ಕೆ ನಾಮಕರಣ ಮಾಡುತ್ತಾರೆ ಎಂದು ತಿಳಿಸಿದ್ದಾರೆ. ನಾಮಕರಣ

ಸಂಪ್ರದಾಯವನ್ನು ಮಡಿಕೆ ತೆಗೆಯುವುದು ಎಂದು ಕರೆಯುತ್ತಾರೆ. ಮಗುವಿನ ತಂದೆ ಮತ್ತು ತಾಯಿ ತಮ್ಮ ಕುಲದೇವತೆಯ ಹೆಸರು ಹೇಳುವರು. ಈ ಹೆಸರು ಹೇಳಿದ ಬಳಿಕ ಅದೇ ಹೆಸರನ್ನು ಕುಲಬಾಂಧವರಲ್ಲಿ ಒಬ್ಬರು ಮಗುವಿನ ಕಿವಿಯಲ್ಲಿ 5 ಬಾರಿ ಕೂಗುವರು. ನಂತರ ಐವರು ಬಂದು ಮಗುವಿಗೆ ವಿಭೂತಿ ಹಚ್ಚಿ ಹೆಸರು ಕರೆದು ತುಳಸಿ ಮತ್ತು ಬೆಲ್ಲ ಬೆರೆಸಿದ ಜಲವನ್ನು ತೀರ್ಥವೆಂದು ಸ್ವೀಕರಿಸುತ್ತಾರೆ. ನಂತರ ಸಮುದಾಯದ ಎಲ್ಲರಿಗೂ ಊಟ ಹಾಕಲಾಗುತ್ತದೆ. ಮಾಂಸ ಭೋಜನವಿಲ್ಲದೆ ನಾಮಕರಣಶಾಸ್ತ್ರ ಪೂರ್ಣವಾಗುವುದಿಲ್ಲ. ನಾಮಕರಣದ ನಂತರ ಮಗುವಿಗೆ ಏನಾದರೊಂದು ತೊಂದರೆಯಾದರೆ ಬದಲಿಯಾಗಿ ಇನ್ನೊಂದು ಹೆಸರು ಕರೆಯುವರು. ಮೊದಲು ರಂಗ, ನಂಜ, ಚಿಕ್ಕಮಲ್ಲಯ್ಯ, ಮಾದಯ್ಯ, ರಂಗೇಗೌಡ, ಮಾದೇಗೌಡ, ಜಡೇಗೌಡ, ಕುನ್ನಮಾರಯ್ಯ ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿತ್ತು. ಇತ್ತೀಚಿಗೆ ಶೀತಲ್, ಕುಮಾರ್, ಸೌಮ್ಯ, ಸುಚಿತ್ರ, ರಕ್ಷಿತ, ಭವ್ಯ, ಆನಂದ, ಅಶೋಕ ಮುಂತಾದ ಹೆಸರುಗಳನ್ನಿಟ್ಟುಕೊಳ್ಳುವುದು ರೂಢಿಯಾಗಿದೆ.

ಹುಡುಗಿಯು ಮೈನೆರೆದ ವಿಷಯ ತಿಳಿದ ಬಳಿಕ ಮನೆಯಿಂದ ಹೊರಗೆ ಕರೆತಂದು ಸ್ನಾನ ಮಾಡಿಸುತ್ತಾರೆ. ಆಕೆಯ ಸೋದರ ಅಥವಾ ತಂದೆ ತಾಯಿ ಕಾಡಿಗೆ ಹೋಗಿ ಹುಲ್ಲು, ಮರದ ಕೊಂಬೆಗಳನ್ನು ಕತ್ತರಿಸಿ ತರುತ್ತಾರೆ. ನಂತರ ಸಣ್ಣ ಗುಡಿಸಲನ್ನು ಕಟ್ಟಿ ಹುಡುಗಿಗೆ ಒಡವೆ ವಸ್ತ್ರ ಮುಂತಾದವುಗಳನ್ನು ತೊಡಿಸಿ ಅವಳ ಕೈಗೆ ಕುಡುಗೋಲು ಮತ್ತು ಬೇವಿನ ಸೊಪ್ಪನ್ನು ಕೊಟ್ಟು ಅವಳನ್ನು ಆ ಗುಡಿಸಲಿನೊಳಗೆ ಕೂರಿಸುತ್ತಾರೆ. ನಿರಂತರವಾಗಿ 5 ಹಗಲು 5 ರಾತ್ರಿ ಹುಡುಗಿ ಗುಡಿಸಲಿನಲ್ಲಿಯೇ ಇರಬೇಕಾಗುತ್ತದೆ. ಈ ಅವಧಿಯಲ್ಲಿ ಪೂರ್ಣ ವಿಶ್ರಾಂತಿ ಕೊಡುತ್ತಾರೆ. ಇಂತಹ ಸಂದರ್ಭದಲ್ಲಿ ಮಕ್ಕಳು ಶಾಲೆಗೆ ಗೈರು ಹಾಜರಾಗುತ್ತಾರೆ. ಐದನೇ ದಿನ ಬೆಳಿಗ್ಗೆ ಹೆಂಗಸರೆಲ್ಲ ಸೇರಿ ಸೋಬಾನೆ ಪದ ಹಾಡುತ್ತಾರೆ. ಸೋದರ ಮಾವ ಆಕೆಯ ಗುಡಿಸಿಲಿನಿಂದ ಸ್ವಲ್ಪ ಹುಲ್ಲನ್ನು ತಂದು ಬೆಂಕಿ ಹಾಕುವನು. ಮೈನೆರೆದ ಹೆಣ್ಣು ಹೊರಗೆ ಬರುವಳು ಆಗ ಸೋದರ ಮಾವ ಹುಲ್ಲಿನ ಬೂದಿಯಿಂದ ಗೆರೆ ಎಳೆಯುವನು. ಗುಡಿಸಲಿನ ಮುಂದಿರುವ ಬೂದಿಯ ಮೇಲೆ ಹಾಕಿರುವ ಗೆರೆಗಳನ್ನು ಹುಡುಗಿ ದಾಟಿ ಬರುತ್ತಾಳೆ. ಆಕೆಯನ್ನು ಅಲ್ಲಿಯೇ ನೆಲದ ಮೇಲೆ ಕೂರಿಸಲಾಗುತ್ತದೆ. ಚಿಕ್ಕ–ಚಿಕ್ಕ ಐದು ರೊಟ್ಟಿಯನ್ನು ತಯಾರಿಸಿ ಮಂಡಿಗಳ ಮೇಲೆ ಎರಡು, ಹೆಗಲುಗಳ ಮೇಲೆ ಎರಡು ಮತ್ತು ತಲೆಯ ಮೇಲೆ ಒಂದನ್ನಿಡುತ್ತಾರೆ. ತಲೆಯ ಮೇಲಿನ ರೊಟ್ಟಿಯನ್ನು ಕಡ್ಡಿಯಿಂದ ಸೀರೆ ಮಡಿಲಿಗೆ ಬೀಳಿಸುತ್ತಾರೆ. ಬಳಿಕ ಸ್ನಾನ ಮಾಡಿಸಿ, ವಸ್ತ್ರಾಭರಣ ಹಾಕಿ ಮನೆಗೆ ಕರೆದೊಯ್ಯುತ್ತಾರೆ. ಹುಡುಗಿಯ ಸೀರೆ ಮಡಿಲಿಗೆ ಮೊದಲು ಬಾಳೆಹಣ್ಣು, ಎಲೆ, ಅಡಕೆ ಹಾಕುತ್ತಾರೆ. ತೆಂಗಿನ ಕಾಯಿ, ಬೆಲ್ಲ, ಕಡ್ಲೆ ಎಲ್ಲವನ್ನು ತುಂಬುತ್ತಾರೆ ಅಥವಾ ಇವೆಲ್ಲವನ್ನು ಪೊಟ್ಟಣ ಕಟ್ಟಿ ಮಡಿಲಿಗೆ ಹಾಕುತ್ತಾರೆ.

ನಂತರ ಸಮುದಾಯದವರು ಅವರವರ ಯೋಗ್ಯತಾನುಸಾರ ಸಾಧ್ಯವಾದಷ್ಟು ಹಣವನ್ನಾಗಲಿ, ವಸ್ತುವನ್ನಾಗಲಿ ಕೊಡುತ್ತಾರೆ. ಈ ಸಂದರ್ಭದಲ್ಲಿ ಸೋದರ ಮಾವನಾದವನು ಒಂದು ಮುದ್ದೆ, ಅನ್ನ ಮತ್ತು ಸಾಂಬಾರನ್ನು ಒಂದು ಜೊಣ್ಣೆಯಲ್ಲಿ (ಬಾಳೆ ಎಲೆ) ತುಂಬಿ 5 ಮಕ್ಕಳನ್ನು ಕರೆದು ಅವಳ ತೊಡೆ ಮೇಲೆ ಕೂರಿಸಿ ಊಟ ಮಾಡಿಸುತ್ತಾರೆ. ಹುಡುಗಿ ಅದನ್ನು ಒಂದೇ ಬಾರಿಗೆ ತಿನ್ನಬೇಕು ನಂತರ ಮೈನೆರೆದ ಹುಡುಗಿ ಬೆಂಕಿಯನ್ನು ದಾಟಿಕೊಂಡು ಮನೆಗೆ ಹೋಗುವಳು.

ಸೋಲಿಗ ಸಮುದಾಯದಲ್ಲಿ ಒಂದೇ ಕುಲಕ್ಕೆ ಸೇರಿದ ಸ್ತ್ರೀ ಮತ್ತು ಪುರುಷರು ಯಾವುದೇ ಕಾರಣಕ್ಕೂ ಮದುವೆಯಾಗುವುದಿಲ್ಲ. ಏಕೆಂದರೆ ಒಂದೇ ಕುಲದವರು ಅಣ್ಣ–ತಮ್ಮ, ಅಕ್ಕ–ತಂಗಿ ಎಂಬ ಭಾವನೆ ಇರುತ್ತದೆ. ಸೋಲಿಗರಲ್ಲಿ ಸೋದರ ಮಾವ ಅಥವಾ ಅತ್ತೆಯ ಮಗ ಅಥವಾ ಮಗಳನ್ನು ವಿವಾಹ ಮಾಡಿಕೊಳ್ಳುವ ಪದ್ಧತಿಯಿದೆ. ಸೋಲಿಗರಲ್ಲಿ ಮದುವೆಯ ವಿಧಾನ ತುಂಬ ಆಕರ್ಷಕವೆನಿಸುವಂತೆ ನಡೆಯುತ್ತದೆ. ಮೊರಬ್ (1977) ರವರು ತಮ್ಮ ಅಧ್ಯಯನದಲ್ಲಿ ಗುರುತಿಸಿರುವಂತೆ ಯುವಕ ತಾನು ಇಷ್ಟ ಪಟ್ಟ ಹೆಣ್ಣಿನೊಂದಿಗೆ ಯಾರಿಗೂ ತಿಳಿಯದ ಹಾಗೇ ಕಾಡಿಗೆ ಓಡಿ ಹೋಗಿ ಅಲ್ಲಿ ಮೂರು ದಿನ ಇದ್ದು ತಮ್ಮ ಗುಡಿಸಲಿಗೆ ಹಿಂತಿರುಗುವರು. ಇದಕ್ಕೆ ಓಡಿ ಹೋಗುವ ವಿವಾಹ ಎನ್ನುತ್ತಾರೆ. ನಂತರ ಇವರನ್ನು ದಂಪತಿಗಳು ಎಂದು ಪರಿಗಣಿಸುತ್ತಾರೆ. ಇವರು ಕುಲದ ಎಲ್ಲರಿಗೂ ಊಟ ಕೊಡಬೇಕಾಗುತ್ತದೆ. ಇದಲ್ಲದೆ ಕುಲದ ಯಜಮಾನ ಬಂದು ಹೆಣ್ಣಿನ ಕತ್ತಿಗೆ ಗಂಡಿನಿಂದ ತಾಳಿ ಕಟ್ಟಿಸುವನು ಅಲ್ಲಿಗೆ ವಿವಾಹ ಪೂರ್ತಿಯಾಗುತ್ತದೆ. ಕೆಲವರು ಪೋಷಕರ ಒಪ್ಪಿಗೆ ಪಡೆದರೆ ಮತ್ತೇ ಕೆಲವರು ಕಾಡಿಗೆ ಹೋಗಿ ಮದುವೆಯಾಗುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ರೀತಿಯ ಪದ್ಧತಿ ಕಡಿಮೆಯಾಗಿದ್ದು, ಬದಲಿಗೆ ನಿಶ್ಚಿತವಾದ ವಿವಾಹಪದ್ಧತಿ ಪ್ರಚಲಿತದಲ್ಲಿದೆ. ಇವರಲ್ಲಿ ವಿವಾಹ ವಿಚ್ಛೇದನಗಳಿಗೆ ಸುಲಭವಾದ ಅವಕಾಶವಿದೆ. ಹಾಗೆಯೇ ಮರುವಿವಾಹ ಅಥವಾ ವಿಧವಾ ವಿವಾಹಗಳು ಸೋಲಿಗರಲ್ಲಿ ಸಾಮಾನ್ಯವಾದ ಪದ್ದತಿಯಾಗಿದೆ (ಸಿಂಗ್.ಕೆ.ಎಸ್–1994).

ಸೋಲಿಗರಲ್ಲಿ ಯಾರಾದರೂ ಮರಣ ಹೊಂದಿದರೆ ಮನೆಗೊಬ್ಬರಂತೆ ಭಾಗವಹಿಸಿ ಶವ ಸಂಸ್ಕಾರ ಮಾಡುತ್ತಾರೆ. ಮೊದಲು ಶವವನ್ನು ನೀರಿನಲ್ಲಿ ಸ್ನಾನ ಮಾಡಿಸಿ, ಪೂಜೆ ಮಾಡಿ ಹೊಸ ಬಟ್ಟೆ, ಗಂಧ, ವಿಭೂತಿ ಹಾಕಿ ಚಟ್ಟದಲ್ಲಿ ತೆಗೆದುಕೊಂಡು ಹೋಗುತ್ತಾರೆ. ಸೋಲಿಗರಲ್ಲಿ ಸತ್ತವರನ್ನು ಹೂಳುವ ಪದ್ಧತಿ ಇದೆ. ಹೂಳುವಾಗ ದಕ್ಷಿಣಕ್ಕೆ ಶವದ ತಲೆಯಿಟ್ಟು ಎಡದ ಮಗ್ಗುಲಾಗಿ ಮಲಗಿಸಿ ಹೂಳುತ್ತಾರೆ. ಆದರೆ ಆತ್ಮಹತ್ಯೆ ಮಾಡಿಕೊಂಡವರನ್ನು ಹೂಳುವ ಬದಲಿಗೆ ಸುಡುತ್ತಾರೆ. ಗುಂಡಿ ತೋಡುವಾಗ ಹೆಚ್ಚು ಬೇರು–ಕಲ್ಲು ಸಿಕ್ಕಿದರೆ ಸತ್ತ ಶವಕ್ಕೆ ಇನ್ನೂ ಆಯುಷ್ಯವಿತ್ತೆಂದು ಕೊಳ್ಳುವರು, ಬರಿ ಮಣ್ಣೆ ದೊರೆತರೆ ಅವರ ಆಯುಷ್ಯ ಅಷ್ಟೇ ಎಂದು ತೀರ್ಮಾನಿಸುವರು. ಸತ್ತವರನ್ನು ಹೂಳುವ ಮೊದಲು ಅವರು ಬಳಸುವ ವಸ್ತುಗಳನ್ನು ಮೊದಲು ಹಾಕಿ ಶವವನ್ನು ಪೂಜೆ ಮಾಡಿ ಈ ಎಲ್ಲಾ ವಸ್ತುಗಳ ಮೇಲೆ ಶವ ಮಲಗಿಸಿ ಎಲ್ಲರೂ ಒಂದೊಂದು ಹಿಡಿ ಮಣ್ಣನ್ನು ಶವದ ಮೇಲೆ ಹಾಕುವರು ನಂತರ ಉಳಿದ ಮಣ್ಣನ್ನು ಶವದ ಮೇಲೆ ತುಂಬುತ್ತಾರೆ. ಹೀಗೆ ಶವ ಸಂಸ್ಕಾರವಾದ ನಂತರ ಸಮಾಧಿಯ ಮೇಲೆ ಗುರುತಿಗಾಗಿ ಗಿಡವೊಂದನ್ನು ನೆಟ್ಟು ಹಾಡಿಗೆ ಹಿಂದಿರುಗುತ್ತಾರೆ. ಹೀಗೆ ಬರುವ ಮೊದಲು ಸಮುದಾಯದ ಯಜಮಾನ ಸಮಾಧಿ ಸ್ಥಳದಲ್ಲಿ ನಿಂತು ಕಾಡಿಗೆ ನಮ್ಮ ಬಂಧು ಬಾಂಧವರು, ಮಕ್ಕಳು, ಪ್ರಾಣಿಗಳು ಬರುತ್ತಾರೆ ನೀವು ಹೆದರಿಸಬಾರದು ಎಂದು ಸತ್ತವರಿಗೆ ಬುದ್ದಿ ಹೇಳಿ ಹಾಡಿಗೆ ವಾಪಸ್ಸಾಗುತ್ತಾರೆ. ಮನೆಯಲ್ಲಿ ದೀಪ ನೋಡಿ ಹುಣಸೆ ಹುಳಿಯನ್ನು ನೆಕ್ಕುತ್ತಾರೆ. ಅಲ್ಲಿಗೆ ಮೈಲಿಗೆ ಕಳೆದು ಹೋಯಿತೆಂದು ಭಾವಿಸಲಾಗುತ್ತದೆ. (ಮಲ್ಲೇಶಪ್ಪ. ಜಿ. 2005) ನಂತರ ಮೂರು ದಿವಸಕ್ಕೆ ಅನ್ನ ನೀರು, ಹನ್ನೆರಡು ದಿವಸಕ್ಕೆ ತಿಥಿ ಮಾಡುತ್ತಾರೆ. (ಕೃಷ್ಣ ಅಯ್ಯಂಗಾರ್ – 1956) ಸತ್ತವರ ಆತ್ಮತೃಪ್ತಿಗಾಗಿ ತಿಥಿಯ ದಿವಸ ಆಡು–ಕುರಿ ಕೋಳಿ ಮುಂತಾದ

ಪ್ರಾಣಿಗಳನ್ನು ಬಲಿ ಕೊಟ್ಟು ಹಾಡಿಯ ಪ್ರತಿಯೊಂದು ಮನೆಯವರನ್ನು ಕರೆದು ಊಟ ಹಾಕುತ್ತಾರೆ. ಊಟ ಹಾಕುವ ಮೊದಲು ಕಾಗೆಗೆ ಎಡೆ ಇಟ್ಟು ಅದು ಎಡೆಯನ್ನು ತಿಂದ ಮೇಲೆ ಇವರು ಊಟ ಮಾಡುತ್ತಾರೆ. ಸತ್ತಿರುವ ಆತ್ಮದ ತೃಪ್ತಿಗಾಗಿ ಮನೆಯ ಹೊರಗಡೆ ಆಹಾರವನ್ನು ಇಡುವರು. ಕಾಗೆಗಳು ಅದನ್ನು ತಿಂದರೆ ಸತ್ತವರ ಆತ್ಮಕ್ಕೆ ತೃಪ್ತಿಯಾಯಿತೆಂದು, ಕಾಗೆ ತಿನ್ನದೆ ಹೋದರೆ ದೇವತೆಗಳು ಅಥವಾ ಪಿತೃಗಳು ಕೋಪಗೊಂಡಿರಬೇಕೆಂದು ತಿಳಿದು ಪುನಃ ಉತ್ತರ ಕ್ರಿಯೆ ಮಾಡುತ್ತಾರೆ.

ಸೋಲಿಗರು ಹಿಂದಿನಿಂದಲೂ ಜಡೆಸ್ವಾಮಿ, ಗಂಗಾಧರೇಶ್ವರ, ಕ್ಯಾತ ದೇವರು, ಹುಲೀರಪ್ಪ, ಮೂಡಲ ಗಿರಿಯಮ್ಮ, ಚಿಕ್ಕಮ್ಮ, ಮಾಸ್ತಮ್ಮ ಮುಂತಾದ ದೇವರನ್ನು ಪೂಜಿಸುತ್ತಾರೆ. (ಸಿಂಗ್.ಕೆ.ಎಸ್. 1994) ಜೊತೆಗೆ ಬಿಳಿಗಿರಿ ರಂಗಸ್ವಾಮಿ ಮತ್ತು ಮಹದೇಶ್ವರ ಇವರ ಮುಖ್ಯ ದೇವರುಗಳಾಗಿವೆ. ಇವರು ಪ್ರಮುಖವಾಗಿ ರೊಟ್ಟಿಹಬ್ಬ, ರಾಗಿಹಬ್ಬ, ಕೊಂಡದಹಬ್ಬ ಮುಂತಾದವುಗಳ ಜೊತೆಗೆ ಗೌರಿ, ಯುಗಾದಿ, ಸಂಕ್ರಾಂತಿ ಮತ್ತು ಮಾರಮ್ಮನ ಹಬ್ಬಗಳನ್ನು ಆಚರಿಸುತ್ತಾರೆ. ರೊಟ್ಟಿಹಬ್ಬ ಸೋಲಿಗರ ಪ್ರಮುಖ ಹಬ್ಬ, ಹೊಸ ಪಸಲಿನಿಂದ ತಯಾರಾದ ರಾಗಿ ರೊಟ್ಟಿಯನ್ನು ಬೆಂಕಿಯಲ್ಲಿ ಸುಟ್ಟು ಅದನ್ನು ಜಡೆಸ್ವಾಮಿಗೆ ಅರ್ಪಿಸುತ್ತಾರೆ. ನಂತರ ಹಾಡಿಯ ಎಲ್ಲರೂ ಒಟ್ಟಿಗೆ ಸೇರಿ ಗೊರುಕನ ಕುಣಿತದಲ್ಲಿ ಭಾಗವಹಿಸುತ್ತಾರೆ. ಸೋಲಿಗರಲ್ಲಿ ದೊಡ್ಡ ಸಂಪಿಗೆ ಮರದ ಜಾತ್ರೆ ಬಹುದೊಡ್ಡ ಆಚರಣೆಯಾಗಿದೆ. ಇವರ ಪೂಜಾ ವಿಧಿ–ವಿಧಾನಗಳಲ್ಲಿ ಪ್ರಧಾನ ಪಾತ್ರ ವಹಿಸುವ ತಮ್ಮಡಿ (ಪೂಜಾರಿ) ಪೂಜಾ ಸಂಧರ್ಭವನ್ನು ಹೊರತು ಪಡಿಸಿದರೆ ಪುನಃ ಆತನು ಎಲ್ಲರಂತೆಯೆ ಸಮನಾಗಿ ದುಡಿಯುತ್ತಾನೆ (ಕೃಷ್ಣಅಯ್ಯಂಗಾರ್–1956) ಮತ್ತು ಪೋಡಿನ ಎಲ್ಲರೊಂದಿಗೆ ಸಮಾನವಾಗಿ ಬೆರೆಯುತ್ತಾನೆ. ಅದು ಅವನಿಗೆ ಒಂದು ಖಾಯಂ ಪದವಿಯಲ್ಲ ಬದಲಿಗೆ ಅದು ಅನುವಂಶಿಕವಾಗಿ ಬಂದಿರುತ್ತದೆ.

ಪ್ರತಿ ಹಾಡಿಗೆ ಅಥವಾ ಪೋಡಿಗೆ ಒಬ್ಬ ಯಜಮಾನನಿರುತ್ತಾನೆ. ಅವನಿಗೆ ಹಾಡಿಯ ಎಲ್ಲರೂ ಗೌರವ ಕೊಡುತ್ತಾರೆ. ಹಾಡಿಯ ಎಲ್ಲಾ ವ್ಯವಹಾರವನ್ನು ಅವನೇ ನೋಡಿಕೊಳ್ಳುತ್ತಾನೆ. ಯಾವುದೇ ಸಮಸ್ಯೆಗಳಿದ್ದರೂ ಅವನೇ ಬಗೆಹರಿಸಿ ಎಲ್ಲಾ ವ್ಯವಹಾರವನ್ನು ನೋಡಿಕೊಳ್ಳುತ್ತಾನೆ. ಇವನ ಸಹಾಯಕ್ಕೆ ಕೋಲುಕಾರನಿರುತ್ತಾನೆ. ಕಟ್ಟೆಮನೆ, ಚಾವಡಿ ಇವರ ನ್ಯಾಯ ಸ್ಥಾನ ಯಜಮಾನ ಕೊಟ್ಟ ತೀರ್ಮಾನ ಅಂತಿಮ ಹಾಡಿಯಲ್ಲಿ ನಡಿಯುವ ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳಲ್ಲದೆ ಇತರೆ ವಿಧಿ–ವಿಧಾನಗಳಲ್ಲಿ ಪ್ರಮುಖ ಪಾತ್ರವಹಿಸುತ್ತಾನೆ. ತಪ್ಪು ಮಾಡಿದವರಿಗೆ ದಂಡ ವಿಧಿಸುವ ಅಧಿಕಾರ ಯಜಮಾನನಿಗೆ ಇರುತ್ತದೆ.

ಸೋಲಿಗರು ಮಾತನಾಡುವ ಭಾಷೆಯನ್ನು ಸೋಲಿಗನುಡಿ ಎಂದು ಕರೆಯುತ್ತಾರೆ. ಇವರು ಮಾತನಾಡುವ ಭಾಷೆಗೆ ಲಿಪಿಯಿಲ್ಲ. ಕೇವಲ ಆಡುಭಾಷೆಯಾಗಿಯೇ ಉಳಿದಿದೆ. ಆದ್ದರಿಂದ ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಓದಲು ಮತ್ತು ಬರೆಯಲು ಬಳಸುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ಸೋಲಿಗರು ಪ್ರಸ್ತುತ ಕನ್ನಡ ಭಾಷೆಯನ್ನೇ ಆಡುಭಾಷೆಯಾಗಿ ಬಳಸುತ್ತಿದ್ದಾರೆ.

ಇತರರನ್ನು ಗೌರವದಿಂದ ಮಾತನಾಡಿಸುವುದು, ಮೃದುವಾದ ಸಂಬೋಧನೆ, ಎಲ್ಲವೂ ತನಗೆ ಬೇಕೆಂಬ ಸ್ವಾರ್ಥವಿಲ್ಲದೆ ನಾಳೆ ಹೇಗೆ ಎಂಬುದರ ಬಗ್ಗೆ ಚಿಂತಿಸದೆ, ಇದ್ದುದರಲ್ಲಿಯೇ ತೃಪ್ತಿಪಡುವಂತಹ ಮೃದು ಮನಸ್ಸು ಸೋಲಿಗರದು. ಹಿಂದೆ ಇವರ ಉಡುಗೆ ತೊಡುಗೆಗಳು ತುಂಬ ಸರಳವಾಗಿದ್ದವು.

ಗಂಡಸರು ಸಾಮಾನ್ಯವಾಗಿ ಕಚ್ಚೆ ಅಥವಾ ತುಂಡು ಪಂಚೆಯನ್ನು ಉಟ್ಟು ವಸ್ತ್ರವೊಂದನ್ನು ಮೈಮೇಲೆ ಹೊದ್ದು ಕೊಳ್ಳುತ್ತಿದ್ದರು. ಇತ್ತೀಚೆಗೆ ಎಲ್ಲರೂ ಅಂಗಿಯನ್ನು ಹಾಕಿಕೊಳ್ಳುತ್ತಾರೆ. ಹೆಂಗಸರು ಸೀರೆಯನ್ನು ಮತ್ತು ಗಂಡುಮಕ್ಕಳು ಪ್ಯಾಂಟು, ಶರ್ಟು ಮತ್ತು ಹೆಣ್ಣು ಮಕ್ಕಳು ಚೂಡಿ, ನೈಟಿ ಮುಂತಾದ ಉಡುಗೆ ತೊಡಿಗೆಗಳನ್ನು ಧರಿಸುತ್ತಾರೆ. ಸೋಲಿಗರ ಜೀವನ ಕ್ರಮದ ತಿರುವಿನ ಘಟ್ಟದಲ್ಲೂ ಅವರ ಆಚರಣೆಗಳಲ್ಲಿ ಸಮಾನ ಸಮಾಜ ಮತ್ತು ಸಾಮೂಹಿಕ ಬದುಕಿನ ಮೌಲ್ಯಗಳನ್ನು ಉಳಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಸೋಲಿಗರು ಸಾಮಾನ್ಯವಾಗಿ ಮನೆ ಹೊರಗೆ ಬಂದು ಒಟ್ಟೊಟ್ಟಾಗಿ ಮಲಗಿ ದಿನಗಳನ್ನು ದೂಡುತ್ತಾರೆ. ದೈವಭಕ್ತಿ, ಗುರುಹಿರಿಯರಲ್ಲಿ ವಿಧೇಯತೆ, ಗೌರವ ಎಲ್ಲವೂ ಅವರಲ್ಲಿದೆ. ಸೋಲಿಗರು ಸಾಮಾಜಿಕ ಕಟ್ಟಳೆ ನಿಯಮಕ್ಕೆ ಬದ್ಧರಾಗಿರುತ್ತಾರೆ. ಪೂಜೆ ಮತ್ತು ಪ್ರಾರ್ಥನೆ ಸಲ್ಲಿಸುತ್ತಾರೆ. ದೇವರನ್ನು ಪೂಜಿಸುವುದರಿಂದ ತಮ್ಮನ್ನು ಕಾಪಾಡುತ್ತಾನೆಂಬ ನಂಬಿಕೆ ಆವರಿಸಿದೆ.

ಮಧು (2002) ರವರು ತಮ್ಮ ಸಂಶೋಧನಾ ಕೃತಿಯಲ್ಲಿ ಸೋಲಿಗರ ಸಾಮಾಜಿಕ ಜೀವನವನ್ನು ಕುರಿತು 'ಸೋಲಿಗರ ಬದುಕಿನ ಕ್ರಮ, ನಂಬಿಕೆಗಳು, ಸಂಬಂಧಗಳು ಇತ್ಯಾದಿ ಎಲ್ಲವನ್ನು ಅವಲೋಕಿಸಿದಾಗ ಇತಿಹಾಸ ಪೂರ್ವದ ವರ್ಗರಹಿತ ಸಮಾಜಕ್ಕೆ ಇವರು ತುಂಬಾ ಹತ್ತಿರವಾಗುತ್ತಾರೆ ಎಂದು ಹೇಳಿದ್ದಾರೆ. ಸೋಲಿಗರ ಹಾಡಿಯ ಪ್ರತಿ ಮನೆಗಳಲ್ಲಿ ಸಾಮಾನ್ಯವಾಗಿ ರಾತ್ರಿ ಕಾಲದಲ್ಲಿ ಬೆಂಕಿ ನಿರಂತರವಾಗಿ ಉರಿಯುತ್ತಿರುತ್ತದೆ. ಪೋಡಿನ ಎಲ್ಲ ಜನರು ತಾವು ಬೆಳೆದುದ್ದನ್ನು ಸ್ವಾರ್ಥದ ಒಂದಂಶವು ಗೊತ್ತಿಲ್ಲದವರಂತೆ, ತಮ್ಮ ತಮ್ಮಲ್ಲಿಯೇ ಹಂಚಿಕೊಳ್ಳುತ್ತಾರೆ. ಪಕ್ಕದ ಮನೆಯ ಮಕ್ಕಳು ಅನಾಥರಾದರೆ, ಸಹಜವೆಂಬಂತೆ ತಮ್ಮ ಮನೆಯ ಮಕ್ಕಳಂತೆಯೇ ಸಾಕಿಕೊಳ್ಳುತ್ತಾರೆ. ಅವರಲ್ಲಿ ಆರ್ಥಿಕ ತಾರತಮ್ಯ ಮತ್ತು ಭೇದಗಳು ಕಂಡುಬರುವುದಿಲ್ಲ. ಗಿರಿಜನರಲ್ಲಿ ಗಂಡು ಹೆಣ್ಣು ಇಬ್ಬರೂ ಸಮಾನರು. ಮನೆಗೆಲಸ, ಹೊಲಗೆಲಸ ಹಾಗೂ ಸೌದೆ ತರುವ ಕೆಲಸ ಎಲ್ಲವನ್ನು ಗಂಡು ಹೆಣ್ಣು ಸಮನಾಗಿ ಹಂಚಿಕೊಳುತ್ತಾರೆ. ಧೈರ್ಯವಂತರಾದ ಸೋಲಿಗರು ಇತರ ಸಮುದಾಯದವರಿಗಿಂತ ಅಪರಿಮಿತವಾದ ಜ್ಞಾನ ಸಂಪತ್ತನ್ನು ಹೊಂದಿದ್ದಾರೆ.

**ಪರಾಮರ್ಶನ ಗ್ರಂಥಗಳು:**


- ಮಧು ಗುಂಡ್ಲುಪೇಟೆ. (2002). *ಕರ್ನಾಟಕದ ಬುಡಕಟ್ಟುಗಳು.* ಅಕ್ಷತ ಪ್ರಕಾಶನ.
- ಮಂಜುನಾಥ, ಬಿ. ಆರ್. (2014). *ಬುಡಕಟ್ಟು ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳು: ಒಂದು ಮಾನವಶಾಸ್ತ್ರೀಯ ಅಧ್ಯಯನ* (ಅಪ್ರಕಟಿತ ಮಹಾಪ್ರಬಂಧ). ಮೈಸೂರು ವಿಶ್ವವಿದ್ಯಾನಿಲಯ.
- Madegowda. C. (2002). 'Tribal Participation in Collection of Non-Timber Forest Products in Biligiri Rangaswamy Temple Wildlife Sanctuary: A Study conducted in Chamarajanagar District of Karnataka State. M.Sc (SD) Thesis submitted to Sikkim Manipal University of Health, Medical and Technological Science, Gangtok, pp-1-110.
- Morab SG.1977.The Soliga of Biligiri Rangana Hills. Memoir No. 45. Anthropological Survey of India Publication.